ನೊಣಗಳು ರಗ್ಗಿನ ಮೇಲೆ ಆಟವಾಡುತ್ತಿದ್ದವು. ಮಗ, ಸೊಸೆ ಮನೆಯಲ್ಲೇ ಇದ್ದರು. ಅವರಿಗೂ ವಯಸ್ಸಾಗಿಬಿಟ್ಟಿತ್ತು. ಪೆಂಚಾಲಯ್ಯನನ್ನು ಕಂಡು, ''ಯಾರು ನೀವು, ಯಾರು ಬೇಕಿತ್ತು?'' ಎಂದು ಕೇಳಿದ್ದ ಮಗ. ಪೆಂಚಾಲಯ್ಯ ತನ್ನ ಪರಿಚಯವನ್ನು ಹೇಳಿಕೊಂಡು, ''ಮೇಷ್ಟ್ರನ್ನ ನೋಡ್ಕಂಡು ಹೋಗೋಣ ಅಂತ ಬಂದೆ.'' ಎಂದು ಹಣ್ಣು ಹಂಪಲಿನ ಬ್ಯಾಗನ್ನು ಮೇಷ್ಟ್ರು ಮಲಗಿದ್ದ ಮಂಚದ ತುದಿಯಲ್ಲಿ ಇಟ್ಟ. ಮೇಷ್ಟ್ರ ಮಗ ಲೇಪಾಕ್ಷಿ ಮೂಲೆಯಲ್ಲಿ ಮಡಚಿಟ್ಟಿದ್ದ ಹಳೆಯ ಗೊದ್ರೇಜ್ ಚೇರನ್ನು ಬಿಡಿಸಿಟ್ಟು ಪೆಂಚಾಲಯ್ಯನನ್ನು ಕೂರಲು ಹೇಳಿದ್ದ. ಗಲಾಟೆಯಿಂದಾಗಿ ಮೇಷ್ಟ್ರು ಮುಖದ ಮೇಲಿನ ರಗ್ಗನ್ನು ಸರಿಸಿ, ''ಯಾರು, ಯಾರು.'' ಎಂದು ಗೊಣಗಿದ್ದರು. ಲೇಪಾಕ್ಷಿ ಮೇಷ್ಟ್ರನ್ನು ಎತ್ತಿ ಮಂಚದ ಅಂಚಿಗೆ ತಲೆದಿಂಬು ಇಟ್ಟು ಒರಗಿಸಿದ್ದ. ಪೆಂಚಾಲಯ್ಯ ಮೇಷ್ಟ್ರ ಕಾಲಿನ ಮೇಲೆ ಕೈ ಇಟ್ಟು ಕಣ್ಣಿಗೆ ಒತ್ತಿಕೊಂಡಿದ್ದ.

ಗುರುಲಿಂಗಪ್ಪ ಮೇಷ್ಟ್ರು ಶಾರೀರಿಕವಾಗಿ ಭಾರೀ ತೆಗೆದುಬಿಟ್ಟಿದ್ದರು. ಪೆಂಚಾಲಯ್ಯ ಸ್ವಲ್ಪ ಬಗ್ಗಿ, ''ನಾನು ಸಾ ಹನುಮಂತಪುರದ ಪೆಂಚಾಲಯ್ಯ. ಪ್ರೈಮರಿ ಸ್ಕೂಲಿನಲ್ಲಿ ನಾಲ್ಕು ವರ್ಷ ನಿಮ್ಮ ಸ್ಟೂಡೆಂಟ್ ಆಗಿದ್ದೆ.'' ಎಂದು ಸ್ಟೂಡೆಂಟ್ ಲೈಫಿನ ನೆನಪನ್ನು ಬಿಚ್ಚಿಟ್ಟಿದ್ದ. ಮೇಷ್ಟ್ರ ಸೊಸೆ ಪೆಂಚಾಲಯ್ಯ ತೆಗೆದುಕೊಂಡು ಹೋಗಿದ್ದ ಹಣ್ಣು ಹಂಪಲಿನಲ್ಲಿ ಸೇಬು ಹಣ್ಣಿನ ಸಿಪ್ಪೆ ತೆಗೆದು, ತಿರುಳನ್ನು ಹಿಚುಕಿ ಪ್ಲೇಟಿನಲ್ಲಿ ಹಾಕಿ ಮುತುವರ್ಜಿಯಿಂದ ಮಾವನ ಬಾಯಿಗೆ ಇಟ್ಟಿದ್ದಳು. ಮೇಷ್ಟ್ರು ಸೇಬಿನ ತೊಕ್ಕನ್ನು ನಾಲಿಗೆಯ ಮೇಲೆ ಆ ಕಡೆ, ಈ ಕಡೆ ಹೊರಳಿಸುತ್ತಾ, ''ತುಂಬಾ ವರ್ಷಗಳೇ ಆಯ್ತು ನೋಡು, ಸರಿಯಾಗಿ ಗೆಪ್ತಿ ಆಗ್ತ ಇಲ್ಲ. ಅಂದಂಗೆ ಯಾರ್ ಪೈಕಿ.'' ಎಂದಿದ್ದರು. ಪೆಂಚಾಲಯ್ಯ, ''ಗಿಡ್ಮೀಸೆ ಓಬುಳ್ನಾಯ್ಕನ ಮಗ'' ಎಂದಿದ್ದ. ಮೇಷ್ಟ್ರು ಏನ್ಮಾಡ್ತಿದ್ದೀಯ, ಮಕ್ಕಳೆಷ್ಟು ಮುಂತಾಗಿ ಎಲ್ಲಾ ವಿಚಾರಿಸಿಕೊಂಡಿದ್ದರು. ಕೊನೆಗೆ, ''ಯಂಗೋ ಬೆಂಗ್ಳೂರ್ ಬಿದ್ದು ನೆಮ್ಮದಿಯಾಗಿದ್ದೀಯ ಬಿಡು. ಈ ನನ್ಮಗ ಲೇಪಾಕ್ಷಿನೇ ಎಡವಟ್ಟಾಗಿದ್ದು. ಎಷ್ಟು ಬಡಕೊಂಡ್ರೂ ಎಸ್‌ಎಸ್‌ಎಲ್ಸಿ ತಟಾಯಿಸ್ಲಿಲ್ಲ.'' ಎಂದು ಮಗನ ಕಡೆ ಕಣ್ಣು ಹೊರಳಿಸಿದ್ದರು. ಮೇಷ್ಟ್ರ ಕಣ್ಣುಗಳು ಮಂದವಾಗಿದ್ದರೂ ಕಿವಿಗಳು ಮಾತ್ರ ವಿಪರೀತ ಚುರುಕಾಗಿದ್ದವು. ''ಈಗೇನಾಗೈತೆ ಮಾವ, ಚನ್ನಾಗೇ ನೋಡ್ಕಂಬ್ತೀವಲ್ಲ. ನಿಮ್ಗೇನು ಕಡಿಮೆ ಮಾಡಿದ್ದೀವಿ.'' ಎಂದು ನಗುತ್ತಾ ಇನ್ನೊಂದು ಚಮಚ ಸೇಬಿನ ತಿರುಳನ್ನು ಬಾಯಿಗಿಟ್ಟಿದ್ದಳು ಸೊಸೆ. ಮೇಷ್ಟ್ರು ರಪ್ಪನೆ, ''ಯಾಕ್ ಮುತುವರ್ಜಿಯಿಂದ ನೋಡ್ಕಂಬ್ತೀರಿ ಅಂತ ಇಡೀ ಊರಿಗೇ ಗೊತ್ತು. ಪಿಂಚಣಿ ಒಂದು ಬರದೆ ಇದ್ದಿದ್ರೆ ಕಾಲಕಸಕ್ಕಿಂತ್ಲೂ ಅದ್ವಾನ ಆಗಿರ್ತಿದ್ದೆ. ನನ್ನ ತಮ್ಮನ ಮಕ್ಕಳು ನೋಡಿದ್ರೊ ಇಲ್ವೋ. ಕೂಳು ಹಾಕ್ದೆ ಅವ್ರುನ್ನ ಹತ್ತೊರ್ಷದಿಂದೆನೆ ಸಾಗಾಕಿಬಿಟ್ರು.'' ಎಂದು ಬೊಚ್ಚು ಬಾಯಲ್ಲಿ ಪುಸಪುಸ ನಕ್ಕಿದ್ದರು. ''ಇವ್ರುನ್ರ ಹೋಟೆಲ್ಲಿಗೆ ಕರ್ಕಂಡೋಗಿ ಒಂದು ಟೀ ಕುಡಿಸ್ಕೊಂಡು ಬಾ.'' ಎಂದು ಪ್ರೀತಿ ತೋರಿಸಿದ್ದರು ಮೇಷ್ಟ್ರು. ಲೇಪಾಕ್ಷಿ ಪೆಂಚಾಲಯ್ಯನ ಜೊತೆ ಬಸ್‌ಸ್ಟ್ಯಾಂಡ್ ಹೋಟೆಲ್ ಕಡೆ ನಡೆದ. ಪೆಂಚಾಲಯ್ಯನಿಗೆ ಯಾಕೊ ಮ್ಯಾಟರ್ ಜಟಿಲವಾಗಬಹುದು ಅನ್ನಿಸತೊಡಗಿತು. ಲೇಪಾಕ್ಷಿಯ ಕಣ್ಣಿನ ಕೆಳಗಿನ ಕೆನ್ನೆ ಕಪ್ಪಗಾಗಿರುವುದು ಪೆಂಚಾಲಯ್ಯನ ಕಣ್ಣಿಗೆ ಬಿದ್ದು, ಈತ ಸ್ವಲ್ಪ ಎಣ್ಣೆ ಪಾರ್ಟಿ ಇರಬಹುದೇ ಎಂಬ ಅನುಮಾನ ಮೂಡಿತ್ತು. ''ಇವೊತ್ತು ಸಂಜೆ ಮಧುಗಿರಿಲಿ ಸಿಗ್ತೀರ? ನಂಗೂ ಸ್ವಲ್ಪ ಕೆಲಸ ಇದೆ. ಸಂಜೆ ಹೊತ್ತು ಏನಾದ್ರೂ ತಗೊತಿರೋ ಹೆಂಗೆ?'' ಎಂದು ಕೇಳಿಯೇ ಬಿಟ್ಟ. ಲೇಪಾಕ್ಷಿ ನಗುತ್ತಾ, ''ಡೈಲಿ ತಗೊಳ್ಳೋಕೆ ನಾವೇನು ನಿಮ್ಮಂಗೆ ಅಫಿಶಿಯಲ್ಸಾ ಸಾರ್. ಏನೋ ಅಮಾಸೆಗೋ, ಹುಣ್ಣಿಮೆಗೋ ಒಂದೊಂದಪ ಅಷ್ಟೆ. ನಾನು ಎಣ್ಣೆ ಹಾಕಿದ ದಿನ ಯಂಗೋ ನಿಮ್ಮ ಮೇಷ್ಟ್ರುಗೆ ಗೊತ್ತಾಗಿಬಿಡ್ತದೆ. ಕಫ ಹೋಗ್ಲಿ ಅಂತ ಅವ್ರುರ್ಗೂ ಹದಿನೈದು ದಿನಕ್ಕೆ ಒಂದೊಂದು ಪೆಗ್ ಬಿಸ್ಕತ್ ಬ್ರಾಂದಿಗೆ ಬಿಸಿನೀರು ಬೆರೆಸಿ ಕುಡಿಸ್ತೀವಿ. ಗುಳ್ಕ ಗುಳ್ಕ ಕುಡಿತಾರೆ ಮೇಷ್ಟ್ರು.'' ಎಂದು ನಕ್ಕ. ಬೆಂಗಳೂರಿನ ತಮ್ಮ ಆಫೀಸಿನಲ್ಲಿ ಮೇಷ್ಟ್ರುಗೆ ಸನ್ಮಾನ ಇಟ್ಟುಕೊಳ್ಳಬೇಕೆಂದಿರುವುದರ